ದಿನಾಂಕ **: 07.02.2026** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ ಶ್ರೀ</u> ಹೆಚ್.ಆರ್.ಕೆ. 2 ನೇ ಎದುರುದಾರರ ಪರ ವಕೀಲರಿಂದಃ

ಈ ಅಪಘಾತದ ಬಗ್ಗೆ ದೂರನ್ನು ನೀಡಿರುವುದು ನಿತೀಶ್ ಪ್ರಸಾದ್ ಶೆಟ್ಟಿ ಅವರ ಪರಿಚಯ ನನಗೆ ಇದೆ. ಅಪಘಾತದ ಬಗ್ಗೆ ಪ್ರತ್ಯಕ್ಷ ಸಾಕ್ಷಿದಾರರು ಯಾರು ಎಂದು ನನಗೆ ತಿಳಿದಿಲ್ಲ. ಪೋಲೀಸರು ಯಾರು ಯಾರಿಗೆ ಪ್ರತ್ಯಕ್ಷ ಸಾಕ್ಷಿದಾರರನ್ನಾಗಿ ಮತ್ತು ಮಹಜರ ಸಾಕ್ಷಿದಾರರನ್ನಾಗಿ ಮಾಡಿದ್ದಾರೆ ಎಂದು ನನಗೆ ತಿಳಿದಿಲ್ಲ. ಮಹಜರಿಗೆ ಸಂಬಂಧಪಟ್ಟಂತಹ ನಕಾಶೆಯನ್ನು ನಾನು ಹಾಜರುಪಡಿಸಿಲ್ಲ. ನಾನು ನಕಾಶೆಯನ್ನು ಹಾಜರುಪಡಿಸಿದ್ದರೆ, ನಮ್ಮ ತಪ್ಪಿನಿಂದ ಅಪಘಾತವಾಗಿರುವುದು ತಿಳಿಯುತ್ತದೆ ಎನ್ನುವ ಕಾರಣಕ್ಕಾಗಿ ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ದ್ವಿಚಕ್ರ ವಾಹನದ ಚಾಲಕರಾದ ದಿನೇಶ್ ರವರು ಅತೀ ವೇಗ ಹಾಗೂ ನಿರ್ಲಕ್ಷತೆ ಯಿಂದ ವಾಹನವನ್ನು ಚಲಾಯಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

ಅಪಘಾತದಿಂದ ನನ್ನ ಎಡಗಾಲಿಗೆ ತೊಂದರೆಯಾಗಿರುತ್ತದೆ. ಅಪಘಾತವಾದ ನಂತರ ನಾನು ಆದರ್ಶ ಆಸ್ಪತ್ರೆ, ಸ್ಪಂದನಾ ಆಸ್ಪತ್ರೆ ಮತ್ತು ಅಥರ್ವಾ ಆಸ್ಪತ್ರೆ ಸೂರತ್ಕಲ್ ನಲ್ಲಿ ಚಿಕಿತ್ಸೆ ಪಡೆದಿದ್ದೇನೆ.

ನನಗೆ ಶಸ್ತ್ರ ಚಿಕಿತ್ಸಯನ್ನು ಡಾ. ಕೆ.ಎಸ್ ರಾವ್, ಉಲ್ಲಾಸ್ ಶೆಟ್ಟಿ ಮತ್ತು ಪ್ರಶಾಂತ್ ಮೋಹನ ರವರು ಮಾಡಿರುತ್ತಾರೆ. ಅವರ ಸಾಕ್ಷ್ಯ ಮಾಡಿಸಬಹುದು. ನಾನು ಸ್ವಂದನಾ ಆಸ್ಪತ್ರೆಯಲ್ಲಿ 15 ದಿನ, ಅಥರ್ವಾ ಆಸ್ಪತ್ರೆಯಲ್ಲಿ ಮೊದಲು 8 ದಿನ, ನಂತರ 10 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ಶಸ್ತ್ರ ಚಿಕಿತ್ಸೆಯಾಗಿ ಆದ ನಂತರ ನನ್ನನ್ನು ಗುಣಮುಖರನ್ನಾಗಿ ಮಾಡಿ ಆಸ್ಪತ್ರೆಯಿಂದ ಬಿಡುಗಡೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನನಗೆ ಈಗ ಯಾವುದೇ ಗಾಯಗಳು ಇರುವುದಿಲ್ಲ ಹಾಗೂ ಯಾವುದೇ ಚಿಕಿತ್ಸೆ ಅಗತ್ಯವಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಅಪಘಾತದ ಪೂರ್ವದಲ್ಲಿ ಜೂಸ್ ಅನ್ನು ತಯಾರಿ ಮಾಡಿ ಮಾರಾಟ ಮಾಡುತ್ತಿದ್ದೆ. ನನಗೆ ಇಷ್ಟೆ ಆದಾಯ ಇದೆ ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ. ನಾನು ಮೊದಲು ಕೂಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಈಗಲೂ ಅದೇ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ನನಗೆ ಮೊದಲಿನಷ್ಟು ಆದಾಯವು ಇದೆ ಎಂದರೆ ಸರಿಯುಲ್ಲ.

ಆಸ್ಪತ್ರೆಯಲ್ಲಿ ನನ್ನನ್ನು ನನ್ನ ಸ್ನೇಹಿತರಾದ ಸಂದೀಪ್‌ರವರು ನನ್ನನ್ನು ನೋಡಿಕೊಂಡಿದ್ದಾರೆ. ನಾನು ವಾಹನ ಬಾಡಿಗೆಗಾಗಲೀ, ಪೌಷ್ಟಿಕ ಆಹಾರಕ್ಕಾಗಲೀ, ಪರಿಚಾರಕರ ಭತ್ಯೆಗಾಗಲೀ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಶಾಶ್ವತ ಅಂಗನ್ಯೂನತೆ ಆಗಿಲ್ಲ

ಎಂದರೆ ಸರಿಯಲ್ಲ. ನನಗೆ ಭವಿಷ್ಯದ ಚಿಕಿತ್ಸೆಯ ಅಗತ್ಯ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಷ್ಟು ನಾನು ವೈದ್ಯಕೀಯ ಚಿಕಿತ್ಸೆಗೆ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಆದಾಯ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ನಾನು ಈಗಲೂ ಮೊದಲಿನಂತೆ ಕೆಲಸ ಮಾಡಲು ಶಕ್ತನಾಗಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಪ್ಪಿನಿಂದ ಅಪಘಾತವಾಗಿರುವ ಕಾರಣ 2 ನೇ ಎದುರುದಾರರು ನನಗೆ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,

ಕಾರ್ಕಳ.